# ಬಿಡುಗಡೆಯನ್ನು ಗ್ರಹಿಸಲಾಯಿತು

ಗ್ರಹಿಸಲಾರದ ಅನೇಕ ಪ್ರವಾಧನೆಗಳಿಗೆ ಅಪೊಸ್ತಲರ ಕೃತ್ಯವು ಉತ್ತರವನ್ನು ನೀಡುತ್ತದೆ. ಒಂದು ವೇಳೆ ಸತ್ಯವೇದದಿಂದ ಈ ಪುಸ್ತಕವನ್ನು ಹೊರಹಾಕುವದಾದರೆ, ಹಳೆ ಒಡಂಬಡಿಕೆಯಲ್ಲಿ ನಾವುಗಳು ಅರಿಯದೆ ಇರುವ ಹಾಗೂ ನೆರವೇರದೆ ಇರುವ ಪ್ರವಾದನೆಗಳನ್ನು ಗ್ರಹಿಸಿಕೊಳ್ಳುವದು ಅಸಾಧ್ಯವಾಗುತ್ತದೆ! ಅದೇ ರೀತಿಯಲ್ಲಿ ಅಪೊಸ್ತಲರ ಕೃತ್ಯಗಳನ್ನು ಹೊರತು ಪಡಿಸಿದರೆ, ಹೊಸ ಒಡಂಬಡಿಕೆಯ ಅನೇಕ ಉಪದೇಶಗಳನ್ನು ಅರಿಯಲು ಅಸಾಧ್ಯವಾಗುತ್ತದೆ.

ದೇವರ ವಿಶೇಷವಾದ ಬಿಡುಗಡೆಯ ಸಂದೇಶವನ್ನು ಅಪೊಸ್ತಲರ ಕೃತ್ಯಗಳು ಪುಸ್ತಕ ಒಳಗೊಂಡಿರುತ್ತದೆ. ಈ ಪುಸ್ತಕದ ಹಿಂದೆ ನಡೆದಿರುವಂಥದ್ದನ್ನು ಈ ಪುಸ್ತಕವೇ ಒಳಗೊಂಡಿದ್ದು, ಮತ್ತು ಮುಂದೆ ಸಂಭವಿಸಲಿರುವ ವಿಚಾರಗಳನ್ನು ಈ ಪುಸ್ತಕದಲ್ಲಿಯೇ ದಾಖಲು ಮಾಡಲಾಗಿದೆ. ಒಬ್ಬನು ಅಪೊಸ್ತಲರ ಕೃತ್ಯಗಳು ಪುಸ್ತಕವನ್ನು ಅರಗಿಸಿಕೊಳ್ಳುವದಾದರೆ, ಅದರಲ್ಲಿರುವ ತುರ್ತು, ಸಂಪೂರ್ಣತೆ, ಹಾಗೂ ಐಖ್ಯತೆಯನ್ನು ತಿಳಿಯಲು ಸಾಧ್ಯವಾಗುತ್ತದೆ. ಈ ಪುಸ್ತಕವಿಲ್ಲದಿದ್ದರೆ, ಶೂನ್ಯದ ಪ್ರಶ್ನೆ ಉಂಟಾಗುತ್ತದೆ.

## ಅಪೊಸ್ತಲರ ಕೃತ್ಯದಿಂದಲೇ ಆರಂಭ

ಹಳೇ ಒಡಂಬಡಿಕೆಯ ಆದಿಕಾಂಡದಂತೆಯೇ ಅಪೊಸ್ತಲರ ಕೃತ್ಯಗಳು ಸಹ ಆರಂಭದ ಪುಸ್ತಕವಾಗಿರುತ್ತದೆ. ಅಪೊಸ್ತಲರ ಕೃತ್ಯಗಳು 2ರಲ್ಲಿ ಜರುಗಿದ ಹತ್ತು ವರ್ಷಗಳ ನಂತರದಲ್ಲಿ ಪೇತ್ರನು, "ಪ್ರಾರಂಭ" ಎಂದು ಉಲ್ಲೇಖಿಸಿರುವನು (ಅಪೊಸ್ತಲರ ಕೃತ್ಯಗಳು 11:15). ಹೊಸ ಒಡಂಬಡಿಕೆಯ ಯೇಸುವಿನ ಜೀವನ ಚರಿತ್ರೆಯ ನಾಲ್ಕು ಪುಸ್ತಕಗಳಿಂದ ಆರಂಭಗೊಂಡರೂ, ಆಶ್ಚರ್ಯಕರವಾದ ಆರಂಭವು ಅಪೊಸ್ತಲರ ಕೃತ್ಯದಲ್ಲಿ ಉಂಟಾಯಿತು ಎಂದು ದೇವರ ವಾಕ್ಯದ ಒಬ್ಬ ವಿದ್ಯಾರ್ಥಿಯು ಅರಿತು ಕೊಳ್ಳಬೇಕು. (ಯೇಸುವಿನ ಜೀವಿತ ಕಾಲದಲ್ಲಿ, ಉಂಟಾದ ಕ್ರೂಜೆಯ ಮರಣವು ಮೋಶೆಯ ಧರ್ಮಶಾಸ್ತ್ರದ ಕಾಲದಲ್ಲಿ ಜರುಗಿದ್ದರಿಂದ ಅದು ಹಳೇ ಒಡಂಬಡಿಕೆಯ ಸಮಯವೇ ಆಗಿದೆ.)

(ಅಪೊಸ್ತಲರ ಕೃತ್ಯಗಳು 2) ಪಂಚಾ ಶತ್ತಮ ದಿನದಂದು ನಡೆದ ಘಟನಾವಳಿಗಳು, ಸುವಾರ್ತೆಯನ್ನು ಪೂರ್ಣ ಪ್ರಮಾಣದಲ್ಲಿ ಸಾರಿದ ಆರಂಭವೇ ಆಗಿರುತ್ತದೆ. ಯೇಸು ಕ್ರಿಸ್ತನ ಅಧಿಕಾರವನ್ನು ಒಪ್ಪಿಕೊಂಡವರು, ಮಾನಸಾಂತರಕ್ಕಾಗಿ ಕರೆಯಲ್ಪಟ್ಟು, "ಯೇಸು ಕ್ರಿಸ್ತನ ನಾಮದಲ್ಲಿ" ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಆಸ್ಪದ ನೀಡಲಾಯಿತು (ಅಪೊಸ್ತಲರ ಕೃತ್ಯಗಳು 2:38). ಅದು ಸಭೆಯ ಆರಂಭದ ಕಾಲವಾಯಿತು, ಕರೆಯಲ್ಪಟ್ಟಂಥ ದೇಹವು ಕ್ರಿಸ್ತನಲ್ಲಿ ವಿಶೇಷ ಸಂಬಂಧವನ್ನು ಪಡೆಯಿತು. ಸಭೆಯನ್ನು ದೇವರ ಆಲಯವೆಂದು ಪರಿಗಣಿಸಿ, ಅದರ ವಿಶೇಷ ಕೆಲಸಕ್ಕೂ ಮತ್ತು ಸಂತೈಸುವಿಕೆಗೂ ಪರಿಶುದ್ಧಾತ್ಮನನ್ನು ಕಳುಹಿಸಿಕೊಡಲಾಯಿತು. ಇದರಿಂದ ಸಭೆಗೆ ಜೀವ ನೀಡಲಾಯಿತು, ಮತ್ತು ಸೇವೆಗಾಗಿ ಅಪೊಸ್ತಲರನ್ನು ಬಲಪಡಿಸಲಾಯಿತು (1 ಕೊರಿಂಥ 3:16). ಲೋಕಕ್ಕೆ ಸುವಾರ್ತೆಯನ್ನು ತಲುಪಿಸುವ ಆರಂಭದ ದಿನವಾಯಿತು. ಇಂತಹ ಒಂದು ಅನ್ಯೋನ್ಯತೆಗಾಗಿ, ದೇವರ ಜನರಲ್ಲಿ ಹಿಂದೆಂದು ಈ ವಿಧವಾದ ಪ್ರೇರಣೆ ಉಂಟಾಗಿರಲಿಲ್ಲ. ಆದಿಕಾಂಡವು ಹಳೇ ಒಡಂಬಡಿಕೆಗೆ ಇರುವಂತ, ಅಪೊಸ್ತಲರ ಕೃತ್ಯಗಳು ಪುಸ್ತಕವು ಹೊಸ ಒಡಂಬಡಿಕೆಗೆ ಆರಂಭವಾಗಿದೆ.

ಅಪೊಸ್ತಲರ ಕೃತ್ಯದಲ್ಲಿ ತಕ್ಷಣವೇ "ಎರಡು" ಎಂಬ ಸಂಖ್ಯೆಯನ್ನು ಗಮನಿಸುತ್ತೇವೆ. ಅಪೊಸ್ತಲರ ಕೃತ್ಯಗಳು ಎರಡು ಪ್ರಮುಖವಾದ ಭಾಗಗಳನ್ನು ಒಳಗೊಂಡಿರುತ್ತದೆ:

ಅಧ್ಯಾಯ 1 ರಿಂದ 12 ಮತ್ತು ಅಧ್ಯಾಯ 13 ರಿಂದ ಪೂರ್ಣ 28 ರವರೆಗೆ ಸುವಾರ್ತಾ ಪ್ರಚಾರದಲ್ಲಿ ಎರಡು ಪ್ರಮುಖ ವ್ಯಕ್ತಿಗಳನ್ನು ಗಮನಿಸುತ್ತೇವೆ: ಪೇತ್ರ ಮತ್ತು ಪೌಲ ಮತ್ತು ಸುವಾರ್ತಾ ಪ್ರಸಾರಣವು ಎರಡು ಪ್ರಧಾನ ಪಟ್ಟಣಗಳಲ್ಲಿ ಜರುಗಿದವು: ಯೆರೂಸಲೇಮು ಮತ್ತು ಸಿರಿಯದ ಅಂತಿಯೋಕ್ಯ. ಎರಡು ಪ್ರಮುಖವಾದ ಧಾರ್ಮಿಕ ಸಂಘಟನೆಗಳು: ಯೆಹೂದ್ಯರು ಹಾಗೂ ಕ್ರೈಸ್ತರು, ಐತಿಹಾಸಿಕವಾಗಿ ಯೇಸು ಮೋಶೆಯ ಕಟ್ಟಳೆಗಳನ್ನು ನೆರವೇರಿಸಿ, "ಪರಿಪೂರ್ಣವಾದ ಬಿಡುಗಡೆಯನ್ನು ನೀಡಿರುವನೆಂಬ ದಾಖಲೆಯನ್ನು ಮಾಡಲಾಗಿದೆ" (ಲೂಕ 24:44, 45; ಯಾಕೋಬ 1:25). ದೇವರು ಕ್ರಿಸ್ತನಲ್ಲಿಟ್ಟಿರುವ ನಿತ್ಯವಾದ ಉದ್ದೇಶಗಳನ್ನು ಅರಿಯಬೇಕೆಂದರೆ, ಈ "ಎರಡು" ಎಂಬ ಅಂಶಗಳಲ್ಲಿರುವ ಹೊಂದಾಣಿಕೆಯನ್ನು ಮನನ ಮಾಡಿಕೊಳ್ಳಬೇಕು.

## ಅಪೊಸ್ತಲರ ಕೃತ್ಯಗಳ ಪುಸ್ತಕವು ನೆರವೇರಿಕೆಯ ಪುಸ್ತಕವಾಗಿದೆ

ಈ ಸ್ತ್ರೀಯ ಸಂತಾನವು ಸೈತಾನನ ತಲೆಯನ್ನು ಜಜ್ಜುವದು ಎಂದು ಆದಾಮನ ಸಮ್ಮುಖದಲ್ಲಿ ದೇವರು ತಿಳಿಸಿದ್ದನು (ಆದಿಕಾಂಡ 3:15). ಸಾವಿರಾರು ವರ್ಷಗಳ ತರುವಾಯ, ಯೇಸು ಕ್ರಿಸ್ತನು ಅಭಿಷೇಕ ಹೊಂದಿ ಅರಸನಾದಾಗ, ಈ ಪ್ರವಾಧನೆಯು ನೆರವೇರಿತು (ಅಪೊಸ್ತಲರ ಕೃತ್ಯಗಳು 2:36). ಪೇತ್ರನು ಈ ಪ್ರವಾಧನೆಯ ಕುರಿತಾಗಿ ಅಪೊಸ್ತಲರ ಕೃತ್ಯಗಳು 2:32, 36ರಲ್ಲಿ ಯೇಸು, ಕ್ರಿಸ್ತನಾಗಿ ಬಂದಿದ್ದರಿಂದ, ಆತನು ಪುನರುತ್ಥಾನ ಹೊಂದಿ ಎದ್ದು ಬಂದದ್ದರಿಂದ, ಅವನು ದೇವರ ಮಗನೇ ಎಂದು ಪ್ರಸಂಗಿಸಿದನು (ರೋಮಾಪುರ 1:4). ಆತನು ಪುನರುತ್ಥಾನ ಹೊಂದಿರುವದರಿಂದ, ಆತನ ಅನುಯಾಯಿಗಳಿಗೆ ಜಯವನ್ನು ದಯಪಾಲಿಸುವನು (1 ಕೊರಿಂಥ 15:57). ಆತನು ಈ ಲೋಕಕ್ಕೆ ಬಂದು, ಬೋಧಿಸಲು ಜೀವಿಸಿದವನಾಗಿ, ರಕ್ಷಿಸಲು ಮರಣವನ್ನು ಹೊಂದಿ, ಅಧಿಕಾರ ನಡೆಸಲು ಎದ್ದು ಬಂದಿದ್ದಾನೆ, "ನಂತರ ತಾನು ಜಯಿಸಿದ್ದ ಬಹು ಜನರನ್ನು ಸೆರೆಹಿಡುಕೊಂಡು ಹೋದನು" (ಎಫೆಸ 4:8). ಆತನು "ಸೈತಾನನ ಕಾರ್ಯಗಳನ್ನು ನಾಶಮಾಡಿದನು" (1 ಯೋಹಾನ 3:8). ಆತನು ಸರ್ಪದ ತಲೆಯನ್ನು ಜಜ್ಜಿಹಾಕಿದನು!

ದೇವರು ಮೋಶೆಯ ಹಾಗೆಯೇ ಇನ್ನೊಬ್ಬ ಪ್ರವಾದಿಯನ್ನು ಎಬ್ಬಿಸುವನು, ಪ್ರತಿಯೊಬ್ಬರು "ಆತನ ಮಾತನ್ನು ಕೇಳುವರು" ಎಂದು ಮೋಶೆ ವಾಗ್ದಾನ ಮಾಡಿದ್ದನು (ಧರ್ಮೋಪದೇಶ ಕಾಂಡ 18:15-19). ಆತನು ಯೇಸುವೇ ಎಂದು ಪೇತ್ರನು ಅಪೊಸ್ತಲರ ಕೃತ್ಯಗಳು 3:18-24ರಲ್ಲಿ ಪ್ರಕಟಿಸಿರುವನು.

ಅರಸನಾದ ದಾವೀದನ ವಂಶದಿಂದ ಒಬ್ಬ ರಕ್ಷಕನು ಬರುವನೆಂದು ದೇವರು ವಾಗ್ದಾನ ಮಾಡಿದ್ದನು (2 ಸಮುವೇಲ 7:12, 13), ಮತ್ತು ಯೇಸು ಪುನರುತ್ಥಾನವಾದಾಗ ಈ ವಾಗ್ದಾನವು ನೆರವೇರಿತು ಎಂದು ಪೇತ್ರನು ತಿಳಿಸಿದನು (ಅಪೊಸ್ತಲರ ಕೃತ್ಯಗಳು 2:30-32). "ಈ ಮೆಸ್ಸಿಯನು" ದಾವೀದನ ವಂಶಜನು ಎಂದು ವೃತ್ತಾಂತದಲ್ಲಿ ದಾಖಲು ಮಾಡಲಾಗಿತ್ತು (1 ಪೂರ್ವಕಾಲವೃತ್ತಾಂತ 17:11, 12), ಹಾಗೆಯೇ ಪೇತ್ರನ ಪ್ರಸಂಗದಲ್ಲಿಯೂ ಈ ಪ್ರಸ್ತಾಪವು ಒಳಗೊಂಡಿತು (ಅಪೊಸ್ತಲರ ಕೃತ್ಯಗಳು 2:30).

"ಕಡೇ ದಿವಸದಲ್ಲಿ" ಪ್ರತಿಯೊಬ್ಬರಿಗೂ ರಕ್ಷಣೆ ದೊರೆಯುವ ವಿಚಾರವಾಗಿ ಯೆಶಾಯನು ಅದರ ಮಹತ್ವದ ಕುರಿತ ಮತನಾಡಿದನು (ಯೆಶಾಯ 2:1-4). "ಕಡೇ ದಿವಸಗಳಲ್ಲಿ" ದೇವರ ಆತ್ಮನು ಪ್ರತಿಯೊಬ್ಬರ ಮೇಲೆ ಇಳಿದು ಬರುವನೆಂದು ಯೋವೇಲನು ಬರೆದಿರುವನು (ಯೋವೇಲನು 2:28). ದಾನಿಯೇಲ 2:44ರಲ್ಲಿ ನೆಬುಕದ್ನೇಜರನ ಕನಸಿನ ದೊಡ್ಡದಾದ ಪ್ರತಿಮೆಯ ಕುರಿತಾಗಿ "ಆ ಅರಸನ ಆಳ್ವಿಕೆಯ ಕಾಲದಲ್ಲಿ" ದೇವರ ರಾಜ್ಯವು ಉಂಟಾಗುವದು,[1] ಆ ರಾಜ್ಯವು ಬಲವುಳ್ಳ ಹಾಗೂ ನಿತ್ಯವಾದ ರಾಜ್ಯ ಎಂಬ ಪ್ರವಾದನೆಯನ್ನು ಮಾಡಲಾಯಿತು (ದಾನಿಯೇಲ 2:44). ಅಪೊಸ್ತಲರ ಕೃತ್ಯಗಳು 2ರ ಘಟನೆಯಲ್ಲಿ ಈ ಎಲ್ಲಾ ಚರಿತ್ರೆಯ

ಫಲದಾಯಕವಾಯಿತು.[2]

ಆಮೋಸನು ಬರೆದು "ಆ ದಿನದಲ್ಲಿ ದಾವೀದನ ಬಿದ್ದು ಹೋಗಿರುವ ಗುಡಿಸಲನ್ನು ಎತ್ತಿ ಕಟ್ಟುವನು ಆಗ ಸಕಲ ಜನಾಂಗಗಳು ದೇವರ ಅನ್ಯೋನ್ಯತೆಯ ಭಾಗವಾಗುವರು" (ಆಮೋಸ್ 9:11, 12). ಈ ಪ್ರವಾದನೆಯಲ್ಲಿ ದೇವರ ಸಾರ್ವಭೌಮತ್ವದಲ್ಲಿ ದಾವೀದನ ಮೂಲಕ, ಆರಾಧನೆಯಲ್ಲಿ ದೇವ ಜನರು ಆ "ಗುಡಿಸಲಿನಲ್ಲಿ" ಸೇರಿಬರುವರು. ಈ ವಾಗ್ದಾನಗಳು ಕ್ರಿಸ್ತನ ಸುವಾರ್ತೆಯಲ್ಲಿ ನೆರವೇರಿದವು ಎಂದು ಯಾಕೋಬನು ತಿಳಿಸಿರುವನು (ಅಪೊಸ್ತಲರ ಕೃತ್ಯಗಳು 15:15-18).

ಯೇಸುವಿನ ವಾಗ್ದಾನದಂತೆ, "ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು" (ಮತ್ತಾಯ 16:18). ಅಪೊಸ್ತಲರ ಕೃತ್ಯವನ್ನು ಹೊರತು ಪಡಿಸಿದರೆ, ಸಭೆಯು ಹೇಗೆ ತನ್ನ ಕಾರ್ಯವನ್ನು ನೆರವೇರಿಸಿತು ಎಂದು ಅರಿಯಲು ಅಸಾಧ್ಯವಾಗುತ್ತದೆ (ಅಪೊಸ್ತಲರ ಕೃತ್ಯಗಳು 2). ರಕ್ಷಿಸಲ್ಪಟ್ಟವರು ದೇವರ ಅನ್ಯೋನ್ಯತೆಗೆ ಒಂದಾಗಿ ಸೇರಿದರು (ಅಪೊಸ್ತಲರ ಕೃತ್ಯಗಳು 2:41, 47), ಅವರು ಕರೆಯಲ್ಪಟ್ಟ ಸಭೆಯವರು ಎನ್ನಿಸಿಕೊಂಡರು (ಅಪೊಸ್ತಲರ ಕೃತ್ಯಗಳು 5:11).

ದೇವರ ರಾಜ್ಯವು ಶಕ್ತಿಯಿಂದ ಬರುವದೆಂದು ಯೇಸು ವಾಗ್ದಾನ ಮಾಡಿದಂತೆ (ಮಾರ್ಕ 9:1) ಮತ್ತು ಆ ಆತ್ಮನು ಬರುವಾಗ ಅವರು ಈ ಬಲವನ್ನು ಹೊಂದುವರು (ಅಪೊಸ್ತಲರ ಕೃತ್ಯಗಳು 1:8). ಆ ಶಕ್ತಿಯು ಪಂಚಾಶತ್ತಮದಿನದಂದು, ಅಪೊಸ್ತಲರ ಮೇಲೆ ಬರಲು ಅವರು ಪವಿತ್ರಾತ್ಮನ ಆಶಕ್ತಿಯನ್ನು ಪಡೆದುಕೊಂಡರು (ಅಪೊಸ್ತಲರ ಕೃತ್ಯಗಳು 2:1-4). ಆದದರಿಂದ ಕ್ರಿಸ್ತನ ರಾಜ್ಯವು ಇಳಿದು ಬಂದಿತು; ಅದು ಸ್ಥಾಪನೆಯಾಯಿತು ಮತ್ತು ಭೂಲೋಕದಲ್ಲಿ ತನ್ನ ಚಟುವಟಿಕೆಯನ್ನು ಆರಂಭಿಸಿತು.

ಯೇಸು ತನ್ನ ಅಪೊಸ್ತಲರನ್ನು ಬಿಟ್ಟು ಹೋಗುವಾಗ, ಸಂತೈಸುವ ಆತ್ಮನು ಬರುವನೆಂದು ವಾಗ್ದಾನ ಮಾಡಿದನು (ಯೋಹಾನ 16:7-13). ವಾಗ್ದಾನದಂತೆ, ಪರಿಶುದ್ಧಾತ್ಮನು ಅಪೊಸ್ತಲರ ಮೇಲೆ ಇಳಿದು ಬಂದನು (ಅಪೊಸ್ತಲರ ಕೃತ್ಯಗಳು 2:1-4).

## ಮುಕ್ತಾಯ

ದೇವರು ನೀಡುವ ಬಿಡುಗಡೆಯ ಕುರಿತಾಗಿ ಅರಿಯಲು ಅಪೊಸ್ತಲರ ಕೃತ್ಯದ ಪುಸ್ತಕವು ಪ್ರಮುಖವಾದ ಮೂಲವಾಗಿರುತ್ತದೆ, ಮತ್ತು ಸುವಾರ್ತೆಯ ವಾಸ್ತವವನ್ನು ತಿಳಿಸುವಂಥದ್ದಾಗಿರುತ್ತದೆ. ಮುಂದಣ ಸಂಗತಿಗಳನ್ನು ಮತ್ತು ಪ್ರವಾದನೆಗಳನ್ನು ಸಂಶಯ ಪಡದಂತೆ ಪಂಚಾಶತ್ತಮ ದಿನದಲ್ಲಿ ಸ್ಪಷ್ಟಪಡಿಸಲಾಯಿತು. ಈ ಪುಸ್ತಕವನ್ನು ಹೊರತು ಪಡಿಸಿದರೆ, ಯೇಸುವನ್ನೆ "ಏಕಾಧಿಪತಿಯು, ರಾಜಧಿರಾಜನು, ಕರ್ತರ ಕರ್ತನು," ಎಂದು ಅರಿತುಕೊಳ್ಳಲು ಅಸಾಧ್ಯವಾಗುತ್ತದೆ (1 ತಿಮೊಥೆ 6:15).

ಅಪೊಸ್ತಲರ ಕೃತ್ಯಗಳು ಪುಸ್ತಕವು "ಗಾಲಿಯ ಮಧ್ಯಭಾಗ" ಇದ್ದಂತೆ, ಸತ್ಯವೇದದ ಇತರೆ ಪುಸ್ತಕಗಳು ಅದರ ಸುತ್ತಲೂ ತಿರುಗುತ್ತಿರುತ್ತವೆ. ಈ ಪುಸ್ತಕದಲ್ಲಿರುವ ಮಹತ್ವದ ಸತ್ಯಗಳನ್ನು ಅರಿಯುವದು ಶ್ರೇಷ್ಟವಾಗಿರುತ್ತದೆ! ಇಲ್ಲದೆ ಹೋದರೆ, ಮನುಷ್ಯರು ನಿರ್ಮಿಸಿರುವ ತಪ್ಪುಗಳಿಗೆ ಒಬ್ಬನು ಸಿಕ್ಕಿಕೊಳ್ಳುವ ಸಾಧ್ಯತೆಯಿದೆ. ಈ ಹೊಸ ಒಡಂಬಡಿಕೆಯ ಸಭೆಯ ಇತಿಹಾಸದ ಪುಸ್ತಕವನ್ನು ಒಬ್ಬನು ಅರಿತುಕೊಳ್ಳದಿದ್ದರೆ, ಅವನು ಸೋಲು ಹೊಂದಿದ ಸಂಘದಲ್ಲಿರುವವನಾಗಿದ್ದಾನೆ. ಅವರು ಈ ಪುಸ್ತಕವನ್ನು ಅರ್ಥಮಾಡಿಕೊಂಡರೆ, ಯಾವುದೇ ಸಂಸ್ಥೆಯು ಪಾಪಕ್ಕೆ ದೇವರಿಂದ ದೊರಕಿದ ಉತ್ತರವೆಂದು ತಿಳಿಯುವರು.

ಪಾಪವನ್ನು ದೇವರು ಹೇಗೆ ಪರಿಹರಿಸುವನೆಂದು, ದೇವರು ತಾನೇ ಈ ಪುಸ್ತಕದಲ್ಲಿ ತಿಳಿಸಿರುವನು. ಯಾವ ಸಭೆಯನ್ನು ಕರ್ತನು ನಿತ್ಯತ್ವದಲ್ಲಿ ಇರಿಸುವೆನೆಂದು ಹೇಳಿರುವನೋ, ಅದು ಮಾತ್ರ ಸಭೆಯಾಗಿದ್ದು, ಆ ಕ್ರಿಸ್ತನ ಆತ್ಮೀಕ ದೇಹದಲ್ಲಿ ಮಾತ್ರ ಉತ್ತರವನ್ನು ಪಡೆಯುವವ

ರಾಗಿದ್ದೇವೆ (ಎಫೆಸ 1:22, 23; 5:23). ಆ ಸಭೆಯು ಒಂದು ಸಂಸ್ಥೆಯಲ್ಲ, ಅಥವಾ ಯಾವುದೇ ಸಂಸ್ಥೆಯು ಆ ಸಭೆಯಾಗಿರುವದಿಲ್ಲ. ಸಂಸ್ಥೆಗಳೆಲ್ಲವು ಮನುಷ್ಯರ ಪ್ರಯತ್ನದಿಂದ ಉದ್ಭವಿಸಿರುತ್ತವೆ; ದೇವರ ಸಭೆಯು, ದೇವರು ಕ್ರಿಸ್ತನಲ್ಲಿ ನಿರ್ಮಿಸಿರುವ ನಿತ್ಯವಾದ ಉದ್ದೇಶವಾಗಿದೆ (ಎಫೆಸ 3:11). ಮೊದಲ ಶತಮಾನದಲ್ಲಿ ಸಾವಿರಾರು ಜನರು ರಕ್ಷಿಸಲ್ಪಟ್ಟು ಪರಲೋಕ ಸೇರಿದವರಾದರು, ಆ ಸಭೆಯ ಮೊದಲು ಯಾವುದೇ ಸಂಸ್ಥೆಗಳಿರಲಿಲ್ಲ. ಅಪೊಸ್ತಲರ ಕೃತ್ಯಗಳಲ್ಲಿನ ದಾಖಲಾಗಿರುವ ಕ್ರೈಸ್ತರಲ್ಲಿದ್ದ ನಂಬಿಕೆ, ವಿಧೇಯತೆಯಿಂದ ಉಂಟಾಗಿದ್ದ ಆನಂದವನ್ನು ನಾವುಗಳೂ ಸಹ ಈ ದಿನದಲ್ಲಿ ಹೊಂದಲು ಸಾಧ್ಯವಿದೆ.

ಅಪೊಸ್ತಲರ ಕೃತ್ಯಗಳು ಪುಸ್ತಕವು ಸತ್ಯವೇದದ ಇತರೆ ಪ್ರೇರಿತವಾದ ಪುಸ್ತಕದಂತೆ ಇದ್ದರೂ, ಇತರೆ ಅರವತ್ತು - ಐದು ಪುಸ್ತಕಗಳನ್ನು ಅರ್ಥಮಾಡಿಕೊಳ್ಳುವ ಮುಖ್ಯ ಪುಸ್ತಕವಾಗಿದೆ. ಅಪೊಸ್ತಲರ ಕೃತ್ಯಗಳು ಪುಸ್ತಕವು ಪ್ರವಾದನೆಯ ಉತ್ತರವಾಗಿದೆ.

---

ಟಿಪ್ಪಣಿಗಳು

[1]ನೆಬುಕದ್ನೇಜರನ ಕನಸಿನಲ್ಲಿ ನಾಲ್ಕು ಲೌಕೀಕ ರಾಜ್ಯಗಳನ್ನು ತೋರಿಸಲಾಗಿದೆ, ಕನಸಿನ ಆಮಹಾ ಪ್ರತಿಮೆಯನ್ನು ಬಂಗಾರದಿಂದಲೂ, ಎದೆ ಮತ್ತು ಭುಜವನ್ನು ಬೆಳ್ಳಿಯಿಂದಲೂ, ಹೊಟ್ಟೆ ಮತ್ತು ತೊಡೆಗಳನ್ನು ಕಂಚಿನಿಂದಲೂ, ಕಾಲುಗಳು ಕಬ್ಬಿಣದಿಂದಲೂ ಪಾದಗಳನ್ನು ಕಬ್ಬಿಣ ಮತ್ತು ಮಣ್ಣಿನಿಂದ ಮಾಡಲಾಗಿತ್ತು. ಬಾಬೇಲಿನ ನಂತರ, ಮೂರು ಮಹಾ ರಾಜ್ಯಗಳು ಬಂದವು. ಆದ್ದರಿಂದ ಬಾಬೇಲನ್ನು ಬಂಗಾರಕ್ಕೂ ಮಧ್ಯ - ಪರ್ಶಿಯವನ್ನು ಬೆಳ್ಳಿಗೂ, ಗ್ರೀಕ್ ಸಾಮ್ರಾಜ್ಯವನ್ನು ಕಂಚಿಗೂ, ರೋಮಾಯವನ್ನು ಕಬ್ಬಿಣಕ್ಕೂ ಹೋಲಿಸಲಾಗಿದೆ. ಪಾದಗಳನ್ನು ಕಬ್ಬಿಣ ಮತ್ತು ಮಣ್ಣಿನಿಂದ ಮಾಡಿದ್ದರಿಂದ, ಅದು ನಾಲ್ಕನೆಯ ರಾಜ್ಯದ ಒಂದು ಭಾಗವಾಗಿತ್ತು, ಅದು ಇನ್ನೊಂದು ರಾಜ್ಯವಾಗಿರಲಿಲ್ಲ. ದಾನಿಯೇಲನ ಚಿಕ್ಕ ಕಲ್ಲಿನ ಗುಂಡು ಉರುಳಿ ಬಂದು ಆ ಪ್ರತಿಮೆಗೆ ಬಡಿಯಿತು, ಅದು ಅದರ ಕಬ್ಬಿಣದ ಹಾಗೂ ಮಣ್ಣಿನ ಪಾದಕ್ಕೆ ಬಡಿಯಲು, ಅಪ್ರತಿಮೆಯನ್ನು ಚೂರು ಚೂರು ಮಾಡಿತು (ದಾನಿಯೇಲ 2:34) ಪ್ರತಿಮೆಗೆ ಬಡಿದ ಆ ಬಂಡೆಯು ಮಹಾ ಪರ್ವತವಾಯಿತು (ದಾನಿಯೇಲ 2:35). [2]ಯೇಸು ಕ್ರಿಸ್ತನ ಹೆಸರಿನಲ್ಲಿ ವಿವರಿಸಬೇಕಾಗಿರುವ ಕೆಲವು ಪ್ರವಾದನೆಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ "ಕಡೇಯ ದಿವಸಗಳು" (ಯೆಶಾಯ 2:2; ಅಪೊಸ್ತಲರ ಕೃತ್ಯಗಳು 2:17). "ಅರಸರ ದಿವಸಕ್ಕೆ" ಹೋಲಿಕೆ (ದಾನಿಯೇಲ 2:44) "ಕರ್ತನ ಮನೆಯ ಪರ್ವತ" (ಯೆಶಾಯ 2:2). "ರಾಜ್ಯಕ್ಕೆ" ಹೋಲಿಕೆ (ದಾನಿಯೇಲ 7:13, 14) "ದಾವೀದನ ಸಿಂಹಾಸನ" (ಅಪೊಸ್ತಲರ ಕೃತ್ಯಗಳು 2:30). ಅಥವಾ "ದಾವೀದನ ಗೂಡು" (ಆಮೋಸ 9:11) ರಕ್ಷಣೆಯೆಂಬ ಆಶೀರ್ವಾದವು "ಸಕಲ ಜನಾಂಗಕ್ಕೂ" ಮೀಸಲಾಗಿದೆ (ಯೆಶಾಯ 2:2), ಮತ್ತು "ಅನೇಕ ಜನರು" (ಯೆಶಾಯ 2:3). "ಚೀಯೋನ್" (ಯೋವೇಲ 2:37) ಈ ಘಟನೆ ನಡೆದ ಸ್ಥಳ. "ಪರ್ವತದ ಮೇಲೆ" (ಯೆಶಾಯ 2:2). ಮತ್ತು "ಯೆರೂಸಲೇಮು" (ಲೂಕ 24:47) ಜಾಗತೀಕ ಸ್ಥಳದ ಕುರಿತು ಬಳಸಲಾಗಿದೆ.